ಹೇಳಿಕೊಂಡರೆ ಈ ಹುಡುಗರು ಹೇಗೆ ಅಪ್ಪಿಕೊಳ್ಳುತ್ತಾರೆ. ಈ ಕಾಲದಲ್ಲಿ ಯಾರು ಒಳ್ಳೆಯವರು ಕೆಟ್ಟವರು, ಯಾರನ್ನು ಯಾರು ಹೇಗೆ ನಂಬುವುದು ಎಂದು ಒಂದೇ ಬಾರಿಗೆ ತಳಮಳಗೊಂಡು, 'ಆಗಲೇ ಹೇಳಿದ್ದೆನಲ್ಲಾ, ಇಲ್ಲಿ ನಮ್ಮಂತ ಹುಡುಗಿಯರಿಗೆ ಸುಖಕ್ಕೂ ವಿಷಕ್ಕೂ ಅಂತರ ಬಹಳ ಕಡಿಮೆ. ನಮ್ಮ ನಮ್ಮ ಕನಸುಗಳಿಗೂ ವಾಸ್ತವಕ್ಕೂ ಮಧ್ಯೆ ಹರಿತವಾದ ಅಲುಗು ಇರ್ತದೆ. ಒಂದು ರೀತಿಲಿ ಕನಸಿನವರು ವಾಸ್ತವಕ್ಕೆ ಮಗ್ಗುಲಾಯಿಸಲಾರರು. ಹಾಗೆನೇ ವಾಸ್ತವದವರೂ ಕೂಡ. ಇಂಥ ಸ್ಥಿತಿಯಲ್ಲಿ ನಾನು ನಿಮ್ಮ ಎದಿರು ವಾಸ್ತವ ಹೇಳಬೇಕೋ ಗೊತ್ತಾಗುವುದಿಲ್ಲ. ನೀವು ವಾರಿಜಾಳ ಬಗ್ಗೆ ಎಷ್ಟೆಲ್ಲ ತಲೆಕೆಡಿಸಿಕೊಂಡಿದ್ದಿರಿ ಎಂಬುದು ನನಗೂ ಗೊತ್ತಿತ್ತು. ಅವಳಿಗೂ ನಿಮಗೂ ಇದ್ದ ಸಂಬಂಧದ ಬಗ್ಗೆ ಕಟುವಾಗಿ ಮಾತಾಡೋಕೆ ನನಗೆ ಆಗುವುದಿಲ್ಲ. ಅದು ನನಗೆ ಸಂಬಂಧಿಸಿದ್ದೂ ಅಲ್ಲ ಅಂತ ಕೈಬಿಡಬಲ್ಲೆ, ಆದರೆ ಇಲ್ಲೆಲ್ಲ ನನಗನಿಸೋದು... ಕ್ಷಮಿಸಿ, ನನಗೆ ನಿಮ್ಮ ಹಾಗೆ ಹೇಳೋಕೆ ಬರೋದಿಲ್ಲ' ಎಂದು ತಟ್ಟನೆ ಮಾತು ನಿಲ್ಲಿಸಿಬಿಟ್ಟಳು. ಇವನು ತನ್ನ ಅಳುಕನ್ನು ತುಳಿದು ಹಾಕಿ 'ನಾನೇ ಮಾತಾಡ್ತೀನಿ, ಆದರೆ ನನ್ನ ಮಾತು ತುಂಬ ಖಾರವಾಗಿರುತ್ತದೆ ತೀವ್ರ ವಿಷಾದದ ಮೊತ್ತವಾಗಿರ್ತವೆ. ನಿಮ್ಮ ಪರಿಚಯದಲ್ಲಿ ಇಷ್ಟೆಲ್ಲ ಹೇಳಿಕೊಳ್ಳಬಹುದೋ ಇಲ್ಲವೋ ಗೊತ್ತಾಗದು. ಆದರೂ ಹೇಳ್ತೇನೆ. ನನಗೆ ತಾಯಂಥ ಹುಡುಗಿಯರು ತುಂಬ ಇಷ್ಟ. ತಾಯ್ತನದ ಸಂಗಾತಿಗಳು ಎಲ್ಲರಿಗೂ ಸಿಗುವಂತಿದ್ದರೆ ಎಷ್ಟೋ ಬಾರಿ ಸಂಸಾರಗಳು ಸುಖದಲ್ಲಿ ಮುಗಿಯುತ್ತಿದ್ದವೇನೋ, ನನ್ನ ತಂಗಿ ತನ್ನ ಗಂಡನನ್ನು ಪ್ರೀತಿಸುವ ಪರಿ ನೋಡಿದ್ದೇನೆ ನಾನು. ಹಾಗೆಯೇ ನನ್ನ ಅತ್ತೆಯರೂ, ಅಜ್ಜಿಯರು, ನೆಂಟರು... ಅವರೆಲ್ಲ ಹೇಗೆ ಗಂಡಸರನ್ನು ಹಲವಾರು ರೀತಿಯಲ್ಲಿ ಪ್ರೀತಿಸುತ್ತಾರೆಂದು ಚೆನ್ನಾಗಿ ಬಲ್ಲೆ. ಹಾಗೆಯೇ ಒಂದು ದಿನವೂ ಗಂಡನ ಮುಖ ಕೂಡ ನೋಡಲು ಹೆದರುವ ಚಿಕ್ಕಮ್ಮನ ಪ್ರೀತಿ ರಾತ್ರಿವೇಳೆ ಕಮಟು ವಾಸನೆಯ ಚಾಪೆಯ ಮೇಲೆ ಮಲಗಿ ಹಿಂಸೆಯಿಂದ ಹೊರಳಾಡಿ ಒಮ್ಮೆಯೂ ಸರಸದ ಮಾತಾಡದೆ ಹಗಲೆಲ್ಲ ಗಂಡನ ಭೀತಿಯಲ್ಲಿರುವುದನ್ನು ನೋಡಿದರೆ, ನನಗೆ ಒಟ್ಟು ಹೆಣ್ಣು ಗಂಡುಗಳ ಸಂಬಂಧಗಳೇ ಹೆದರಿಸುತ್ತವೆ. ನಮ್ಮ ಊರಿನಲ್ಲಿ ಬೆಳ್ಳಕ್ಕ ಅಂತ ಇದ್ದಾಳೆ. ಅವಳು ತನ್ನ ಗಂಡನನ್ನು ಹೇಗೆ ಹಿಡಿದು ಚಚ್ಚುತ್ತಾಳೆ ಎಂದು ನೋಡಿದರೆ ಖಂಡಿತ ನೀವು ಓದಿದ ಹುಡುಗಿಯರು ಕೆಂಡಕಾರಬಹುದು. ಇಲ್ಲವೇ ಚಪ್ಪಾಳೆ ತಟ್ಟಬಹುದು. ನನಗೆ ಹುಡುಗಿಯರ ಬಗ್ಗೆ ಕಠಿಣವಾದ ಒಂದು ನಂಬಿಕೆಯಿದೆ. ಆಕೆಯ ಸೆಕ್ಸಿಗೂ ಅವಳನ್ನು ಸಂಗಾತಿಯಾಗಿ ಬಯಸುವ ಹುಡುಗನಿಗೂ ನೇರವಾಗಿ ಮಾನವೀಯ ಸಂವೇದನೆಗಳ ನಿಖರವಾದ ಒಂದು ಗಟ್ಟಿಯಾದ ಬಂಧ ಇರಬೇಕೇ ಹೊರತು ಬಣ್ಣ ಬಣ್ಣದ ಬಯಕೆಗಳು ಪ್ರಧಾನ ಆಗಕೂಡದು. ಇದು ನನ್ನ ಸದ್ಯದ ತಿಳಿವಳಿಕೆ ಮಾತ್ರ. ಈಗ ನಿಮಗನ್ನಿಸುತ್ತಿರಬಹುದು ಹೆಣ್ಣನ್ನು ಬಹಳ ಜಾಣ ಮಾತು ಮತ್ತು ವಿಚಾರಗಳಿಂದ ಇದೇ ರೀತಿ ಕಟ್ಟು ಹಾಕುವುದು ಎಂದು. ನಾನು ನಂಬುವುದಕ್ಕೂ ಹೊರಗೆ ತೂಗಿನೋಡುವುದಕ್ಕೂ ಬೆಚ್ಚಿ ಬೀಳಿಸುವಷ್ಟು ಅಂತರ ಇರುವುದನ್ನು ನೋಡಿದರೆ ಬೇಸರವಾಗುತ್ತದೆ' ಎಂದ. ರಾಜಿಗೆ ಆ ವೇಳೆಗೆ ತಲೆ ಬಿಸಿಯಾಗಿ 'ಇದೆಲ್ಲಾ ನನ್ನ ಜೊತೆ ಯಾಕೆ ಹೇಳುತ್ತೀರಿ' ಎಂದಳು. ಕಸಿವಿಸಿಯಾಗಿ 'ಕ್ಷಮಿಸಿ, ಕೊನೆಗೂ ನನ್ನೊಳಗೆ ಒಬ್ಬ ಗಂಡಸು ಕುಳಿತಿರುತ್ತಾನಲ್ಲಾ ಅವನನ್ನು ಮೀರಲು ಎಷ್ಟೇ ಪ್ರಯತ್ನಿಸಿದರೂ ನನ್ನಿಂದ ಆಗುತ್ತಿಲ್ಲ' ಎನ್ನುತ್ತಾ ತನ್ನ ಅತ್ತೆ ಯಾವನೋ ಜೊತೆ ಪ್ರೇಮಿಸಿ ಓಡಿ ಹೋಗಿದ್ದಾಗ ಆಕೆಯ ಬೆನ್ನಟ್ಟಿದ್ದ ಚಿಕ್ಕಪ್ಪಂದಿರು ಭೀಕರವಾಗಿ ಹೊಡೆದು ಎಳೆದುತಂದು ಕತ್ತಲೆ ಮನೆಯಲ್ಲಿ ಕೂಡಿಟ್ಟು ಅನ್ನ ನೀರು ಕೊಡದೆ ಸವೆಸಿ ಸವೆಸಿ ಕೊನೆಗೆ ತನ್ನ ಪ್ರೇಮವನ್ನು ವಿರಕ್ತಿಯಾಗಿಸಿಕೊಂಡು ಯೌವ್ವನವನ್ನು ಕನಸುಗಳನ್ನು ಆಳದ ವಿಷಾದವನ್ನೂ ಮೆಲುಕು ಹಾಕುತ್ತಾ ಮುದುಕಿಯಾಗಿಬಿಟ್ಟಿದ್ದನ್ನು ನೆನೆದುಕೊಂಡ. ಆಗ ಚಿಕ್ಕಪ್ಪಂದಿರು ಅತ್ತೆಗೆ ಹಿಂಸಿಸುವಾಗ ಸಣ್ಣವನಿದ್ದ ತಾನು ಅತ್ತೆಯ ಬಗ್ಗೆ ಅನುಕಂಪಿಸಿದ್ದರೂ ಅತ್ತೆಯನ್ನು ಕರೆದುಕೊಂಡು ಹೋಗಿದ್ದವನನ್ನು ನೆನೆದುಕೊಂಡು ಅವನ